# ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ

## ಸಿ ಸಿ - 884/2022

ದಿನಾಂಕಃ 15.12.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

| | | |
|---|---|---|
| ಹೆಸರು | : | ಕೊಟ್ರೇಶ್ |
| ತಂದೆಯ ಹೆಸರು | : | ಗುರುಸಿದ್ದಯ್ಯ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಎಂ.ಬಿ ಅಯ್ಯನಹಳ್ಳಿ |

## ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ

ಚಾ.ಸಾ 10 ಮತ್ತು 11 ರವರ ಪರಿಚಯ ನನಗೆ ಇರುತ್ತದೆ. ಹೀಗ್ಗೆ 3 ವರ್ಷಗಳ ಹಿಂದೆ ನಾನು ನಮ್ಮ ಮನೆಯಲ್ಲಿ ಇದ್ದೆ, ನಮ್ಮ ಊರಿನವರು ನನಗೆ ಕರೆ ಮಾಡಿ ನಿಮ್ಮ ತಮ್ಮ ಸ್ವಾಮಿಯವರನ್ನು ಕರೆದು ವಾಪಾಸ್ ಬರುತ್ತಿರುವಾಗ ಎನ್.ಹೆಚ್-50 ರಸ್ತೆಯಲ್ಲಿ ಚಿದಾನಂದಪ್ಪನವರ ಕಾಂಪೌಂಡ್ ಪಕ್ಕ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ. ನನಗೆ ಅಪಘಾತದ ವಿಚಾರ ತಿಳಿದ ನಂತರ ನಾನು ಅಪಘಾತಸ್ಥಳಕ್ಕೆ ಹೋಗಿರುತ್ತೇನೆ, ಅಲ್ಲಿ ನನ್ನ ತಮ್ಮ ಶಿವಪ್ರಸಾದ್ ಗೆ ತಲೆಗೆ ಮತ್ತು ದೇಹಕ್ಕೆ ತೀವ್ರ ಸ್ವರೂಪದ ಗಾಯಗಳು ಆಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ಸದರಿ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ಸ್ಥಳದಲ್ಲಿ ಇದ್ದ ವ್ಯಕ್ತಿಗಳು ನನಗೆ ತಿಳಿಸಿರುತ್ತಾರೆ. ಈ ಸಂಬಂಧವಾಗಿ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 1-ಎ ಎಂದು ಗುರುತಿಸಲಾಯಿತು.

ಮಾರನೇ ದಿನ ಪೊಲೀಸರು ಅಪಘಾತವಾದ ಸ್ಥಳಕ್ಕೆ ಬಂದಿದ್ದರು ಅಲ್ಲಿ ನನ್ನ ಮತ್ತು ನಾಗರಾಜ್ ಮತ್ತು ಇನ್ನೊಬ್ಬರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 9-00 ರಿಂದ 10-00 ಗಂಟೆಯವರೆಗೆ ಜರುಗಿಸಿರುತ್ತಾರೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಕೃತ್ಯಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು

ನಿ.ಪಿ 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ 2-ಎ ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 3 ಮತ್ತು 4 ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸ.ಸ.ಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲಾಯಿತು ಹಾಗೂ ಸ.ಸ.ಅ ರವರ ಕೋರಿಕೆಯಂತೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು ಸ.ಸ.ಅ ರವರಿಂದಃ</u>**

ದಿಃ 24.02.2022 ರಂದು ಬೆಳಿಗ್ಗೆ 10-30 ಗಂಟೆಗೆ ನನ್ನ ತಮ್ಮ ಟಿ.ವಿ.ಎಸ್ ಮೊ.ಸೈ ನಂಃ ಕೆಎ-35/ಇ.ಕೆ-3722 ನೇದ್ದರಲ್ಲಿ ರಸ್ತೆ ದಾಟುತ್ತಿದ್ದಾಗ ಹೊಸಪೇಟೆ ಕಡೆಯಿಂದ ಕಾರ್ ನಂಃ ಕೆಎ-03/ಎನ್.ಎಲ್-1085 ನೇದ್ದು ಜೋರಾಗಿ ಬಂದು ಡಿಕ್ಕಿಪಡಿಸಿರುತ್ತದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಮನೆಯಲ್ಲಿ ಇದ್ದೆ. ಆ ನಂತರ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ತಮ್ಮ ಮೃತಪಟ್ಟಿರುತ್ತಾನೆ. ಆ ನಂತರ ಶವವನ್ನು ಕೂಡ್ಲಿಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ.

ದಿಃ 27.02.2022 ರಂದು ಬೆಳಿಗ್ಗೆ 11-30 ರಿಂದ 12-30 ಗಂಟೆಗೆ ನಾನು ಸ್ಥಳ ತೋರಿಸಿದ ಮೇರೆಗೆ ಚಾ.ಸಾ 6 ಮತ್ತು 7 ರವರ ಸಮಕ್ಷಮ ಕೃತ್ಯಸ್ಥಳಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ರಸ್ತೆ ಕಾಮಗಾರಿ ನಡೆಯುತ್ತಿದ್ದರು ಸಹ ಆರೋಪಿ ವೇಗವಾಗಿ ಬಂದು ನನ್ನ ತಮ್ಮ ಚಲಾಯಿಸುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂಬುದಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u>**

ದೂರು ಮತ್ತು ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ.**